ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅದಕ್ಕೋಸ್ಕರವೇ ಮೇಲಿಂದ ಮೇಲೆ ಪುಸ್ತಕಗಳನ್ನು ಬದಲಾವಣೆ ಮಾಡದೆ ಇನ್ನು ಮೂರು ವರ್ಷದವರೆಗೂ ಹಿಂದಿನ ಪುಸ್ತಕಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಆದ್ದರಿಂದ ಈ ವರ್ಷ ಹೊಸ ಪಠ್ಯ ಪುಸ್ತಕಗಳನ್ನು ಹೊಸದಾಗಿ ಪ್ರಿಸ್ಕ್ರೈಬ್ ಮಾಡದೆ ಹಳೆಯ ಪುಸ್ತಕಗಳನ್ನೇ ಕಂಟಿನ್ಯೂ ಮಾಡುತ್ತಿದ್ದೇವೆ. ಅದರಿಂದ ಏನೂ ಗೊಂದಲವಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಸಾರ್ವಜನಿಕ ಮುಖಂಡರನ್ನು ಕಮಿಟಿಗಳಿಗೆ ಹಾಕುವಾಗ ಕಮಿಟಿಯವರ ದಾಕ್ಷಿಣ್ಯಕ್ಕೊಳಗಾಗಿ ಪಠ್ಯಪುಸ್ತಕಗಳನ್ನು ಕೊಡಬಾರದು ಎಂಬುದಾಗಿ ಕಾನೂನು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಸಾರ್ವಜನಿಕ ಮುಖಂಡರಮೇಲೆ ಸಂಶಯ ಪಟ್ಟರೆ ಅವರಿಂದ ಇಲ್ಲದ ನಲ್ಲದ ಆರೋಪಣೆಗಳು ಬರುತ್ತವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಕೆಲವರು ನೂರಾರು ಕಮಿಟಿಗಳಲ್ಲಿದ್ದಾರೆಂಬುದು ಸರ್ಕಾರಕ್ಕೆ ಗೊತ್ತೇ ?

ಶ್ರೀ ಎಸ್. ಆರ್. ಕಂಠಿ.—ಬಹಳ ಕಮಿಟಿಗಳಲ್ಲಿ ಇರುವವರನ್ನು ಈ ಕಮಿಟಿಗೆ ಹಾಕಬೇಡಿ ಎನ್ನುವ ವಿಚಾರವನ್ನು ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ತಮ್ಮ ಪಠ್ಯ ಪುಸ್ತಕಗಳಲ್ಲಿರತಕ್ಕ ಕನ್ನಡ ಶಬ್ದಗಳನ್ನು ಓದಿದರೂ ಸರಿಯಾಗಿ ಅರ್ಥವಾಗುತ್ತಿಲ್ಲವೆಂದು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಸ್. ಆರ್. ಕಂಠಿ.—ಅಂಥಾದ್ದು ಯಾವುದಾದರೂ ಇದ್ದರೆ, ಮಾನ್ಯ ಸದಸ್ಯರು ಕೂಡಲೇ ನನಗೆ ತಿಳಿಸಲು ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಲ್ಲದೆ ನಮ್ಮ ರಾಜ್ಯ ಭಾಷೆ ಕನ್ನಡವಾದರೂ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ರೀತಿಯಿಂದ ಕನ್ನಡ ಶಬ್ದಗಳನ್ನು ಪ್ರಯೋಗ ಮಾಡುವುದರಿಂದ ಕೆಲವು ಕಡೆ ಆ ರೀತಿ ವ್ಯತ್ಯಾಸಗಳಾಗುತ್ತವೆ. ಹಳೆಯ ಮೈಸೂರಿನ ಪುಸ್ತಕಗಳು ಸೌತ್ ಕೆನರಾದವರಿಗೆ ಆಗುವುದಿಲ್ಲ. ಸೌತ್-ಕೆನರಾದವರದು ಇಲ್ಲಿ ಆಗುವುದಿಲ್ಲ. ಇಂಥಾದ್ದನ್ನು ಈಗ ಸರಿ ಮಾಡಬೇಕಾಗಿದೆ. ಇದು ಎಲ್ಲರಿಗೂ ಸಾಮಾನ್ಯವಾಗಿ ತಿಳಿದಿದ್ದರೂ ಆ ಶಬ್ದಗಳು ಎಲ್ಲರಿಗೂ ಗೊತ್ತಾಗುತ್ತಿಲ್ಲ. ಆ ದೃಷ್ಟಿಯಿಂದ ಕೆಲವು ಶಬ್ದಗಳನ್ನು ಬೇಕೆಂತಲೇ ಸೇರಿಸಲಾಗಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಇದರಿಂದ ಕನ್ನಡ ಭಾಷೆ ಹಾಳಾಗಿ ಹೋಗಿ ಬೆರಿಕೆ ಕನ್ನಡ ಭಾಷೆಯಾಗುತ್ತದಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಯಾವತ್ತೂ ಕನ್ನಡ ಭಾಷೆ ಪರಿಶುದ್ಧವಾದ ಭಾಷೆ. ಅದು ಸುಪ್ರಸಿದ್ಧ ಭಾಷೆಯಾಗಿಯೇ ಉಳಿಯುತ್ತದೆ.

ಶ್ರೀ ಟಿ. ಜಿ. ನಂಜುಂಡಯ್ಯ.—ಈಗ್ಗೆ ಐದಾರು ತಿಂಗಳುಗಳು ಕಳೆದರೂ ಮೈಸೂರಿನ ಭಾಷೆಗಳ ಪುಸ್ತಕಗಳು ಬರುವ ಅವಕಾಶವೇ ಇಲ್ಲ. ಈಗಲಾದರೂ ಅವನ್ನು ತರಿಸಲು ಅನುಕೂಲ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಮೈಸೂರಿನ ಭಾಷೆಯಲ್ಲಿ ಸ್ವಲ್ಪ ತೊಂದರೆ ಇದೆ. ಪಟ್ಟಿ ಕೊಟ್ಟಿದ್ದಾರೆ. ಇದರಲ್ಲಿ ಯಾರಿಗೆ ಪುಸ್ತಕ ಬರೆಯುವುದಕ್ಕೆ ಸಾಧ್ಯವಿಲ್ಲವೋ ಅಂತಹವರಿಗೆ ಸರ್ಕಾರದವರು ಎಷ್ಟೆಷ್ಟು ರೀತಿಯಿಂದ ಅನುಕೂಲವನ್ನು ಕಲ್ಪಿಸಿ ಕೊಡಬೇಕೋ ಅಷ್ಟು ರೀತಿಯಿಂದ ಕೊಡುತ್ತಿದ್ದೇವೆ

Choice in the matter of choosing the Medium of Instruction while entering the High Schools.

*Q.—279. GANJI VEERAPPA (Harihar).—

Will the Government be pleased to state.—

(*a*) whether it is a fact that the students entering the High Schools have no free choice in the matter of choosing the medium of instruction;

(*b*) whether it is a fact that there are more Kannada medium classes than English medium classes ;

(*c*) the basis on which the students are given the particular medium of instruction, Kannada or English ?

A.- Sri S. R. KANTHI (Minister for Education).—

(*a*) Yes, subject to safeguards for linguistic minorities.

(*b*) Yes.

(*c*) English medium is given to the following categories of students :—

(i) Those whose mother tongue is English and those who are promoted from the Primary Schools with English as medium.

(ii) Those who belong to the migratory population, whatever their mother tongue may be.

(iii) Children of parents belonging to the All-India Services liable to transfer from State to State.

(iv) Children of employees of Banks, Firms and other business concerns, which have branches in more than one State and who are liable to transfer from State to State.

(v) Those whose mother tongue is a minority language for which no provision for teaching the minority language exists at the Secondary stage in the Schools of the locality.

(vi) Seats left over after providing for the above categories of students may be filled up by other students who desire to take up English medium on the basis of the marks obtained by them in English at the VII Standard Annual Examination.

† Sri S. R. KANTHI.—Answers printed with one change ; 'yes, subject to linguistic minorities." ಇನ್ನೊಂದು ಹೇಳಬೇಕಾಗಿತ್ತು. ನಾವು 3 ಭಾಷೆಗಳನ್ನು ಒಪ್ಪಿಕೊಂಡಿದ್ದೇವೆ. Three languages formula. ಒಂದು ಇಂಗ್ಲಿಷ್, ಒಂದು ಹಿಂದಿ, ಇಪ್ಪರಡು ಕಂಪಲ್ಸರಿಯಾಗಿವೆ. ಮೂರನೆಯದರಲ್ಲಿ ಅನೇಕ ಗ್ರೂಪುಗಳನ್ನು ಸೇರಿಸಿದ್ದೇವೆ ಅದೂ ಸಹ ಕಂಪಲ್ಸರಿ ಗ್ರೂಪ್. It is one of the electives. ಮೈನಾರಿಟಿಯವರು ಕನ್ನಡವನ್ನು ತೆಗೆದುಕೊಳ್ಳಬಹುದು ಎಂಬುದಾಗಿ ಹೇಳಿ ಅವರನ್ನು ಅಂತಹ ಶಾಖೆಗೆ ಬಿಡಬಹುದು.

Sri GANJI VEERAPPA.—The answer to (*a*) is "yes, subject to safeguards for linguistic minorities." And you have amended it. What is the idea behind the policy of Government in the matter of free choice to students for taking English or Kannada medium ?

ಶ್ರೀ ಎಸ್. ಆರ್. ಕಂಠಿ.—ಅಲ್ಪ ಸಂಖ್ಯಾತರಾದವರು ಮೈನಾರಿಟಿಯವರು ಮಾತೃಭಾಷೆಯಾದ ಕನ್ನಡವನ್ನು ತೆಗೆದುಕೊಳ್ಳಲಿಕ್ಕೆ ಏನೂ ತೊಂದರೆಯಿಲ್ಲ. ಅದಕ್ಕೆ ಪ್ರಾವಿಷ್ ಮಾಡಿದ್ದೇವೆ. ಕನ್ನಡ ಮಾತೃಭಾಷೆ ಇರುವವರು ಇಂಗ್ಲೀಷನ್ನು ತೆಗೆದುಕೊಳ್ಳುತ್ತೇವೆಂದರೆ ಅಲೊ ಮಾಡುತ್ತಿಲ್ಲ. ಯಾರಿಗೆ ಇಂಗ್ಲಿಷ್ ಪ್ರಾವಿಷ್ ಇದೆಯೋ ಅಂತಹವರು ಇಂಗ್ಲಿಷ್ ಕಲಯುವುದಕ್ಕೆ ಹೋಗುತ್ತಾರೆ. ಆದರೆ ಕನ್ನಡದವರು ಇಂಗ್ಲಿಷ್ ಭಾಷೆ ಮೀಡಿಯಮ್ ಕೊಡಿ ಎಂದು ಹೇಳುವುದು ಸರಿಯಲ್ಲ.

ಶ್ರೀ ಗಾಂಜಿ ವೀರಪ್ಪ.—ಈ ರೀತಿ ರಿಪ್ರಿಕ್ಷ್ ಹಾಕಿರುವುದರಿಂದ ಯೂನಿವರ್ಸಿಟಿಗೆ ಯಾರೂ ಹೋಗದೆ ಕನ್ನಡ ವಿದ್ಯಾರ್ಥಿಗಳು ವಿಶೇಷವಾಗಿ ತೇರ್ಗಡೆಯಾಗದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅದು ಇರಬಹುದು. ನನಗೇನೂ ಗೊತ್ತಿಲ್ಲ. ಯೂನಿವರ್ಸಿಟಿಯಲ್ಲಿ ಗ್ರಾಜುಯೇಟ್ಸಾಗಿ ಕನ್ನಡ ಅಭಿವೃದ್ಧಿಯಾಗಬೇಕು.

ಶ್ರೀ ಗಾಂಜಿ ವೀರಪ್ಪ.—ಈ ರೀತಿ ರಿಸ್ಟ್ರಿಕ್ಷನ್ಸ್ ಹಾಕುತ್ತಿರುವುದರಿಂದ higher studiesಗೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿ ಕಾಲೇಜುಗಳಿಗೆ ಹೋಗುವುದಕ್ಕೂ ಅಲ್ಲಿ ಸೈನ್ಸ್ ಸಬ್ಜೆಕ್ಟುಗಳನ್ನು ತೆಗೆದುಕೊಳ್ಳುವುದಕ್ಕೂ ಬಹಳ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಸ್ಕೂಲುಗಳಲ್ಲಿ ಸೈನ್ಸ್ ಸಬ್ಜೆಕ್ಟುಗಳನ್ನು ವಿದ್ಯಾರ್ಥಿಗಳು ಕನ್ನಡದಲ್ಲಿಯೂ ಕಲಿಯುತ್ತಾ ಇದ್ದಾರೆ. ಬಹಳ ಚೆನ್ನಾಗಿ ಕಲಿಯುತ್ತಾ ಇದ್ದಾರೆ. ಅಂತಹ ಮಕ್ಕಳಿಗೆ ಪಿ. ಯು. ಸಿ. ಗೆ ಹೋದ ಮೇಲೆ ಇಂಗ್ಲಿಷ್‌ನಲ್ಲಿ ಪಾಠ ಹೇಳುವುದರಿಂದ ಕೆಲಮಟ್ಟಿಗೆ ಅನುಕೂಲ ಮತ್ತು ಅನಾನುಕೂಲಗಳುಂಟು. ಅಂಥಾದ್ದನ್ನು ಸರಿಹೊಂದಿಸಬೇಕಾದರೆ ಈಗಿನ ಸಂದರ್ಭದಲ್ಲಿ gradual transfer from English to regional language is inevitable.

Sri GANJI VEERAPPA.—In restraining the students from having free choice in the matter of choosing the medium of instruction in high school standards, is it the idea of Government to restrict the number of students taking English medium ?

ಶ್ರೀ ಎಸ್. ಆರ್. ಕಂಠಿ.—ನಾನು ಆಗಲೇ ಹೇಳಿದೆ. ಮೈನಾರಿಟಿಗೆ ಮಾತೃ ರಿಯಾಯಿತಿ ಕೊಡುತ್ತೇವೆ. ಆದರೆ ಮೆಜಾರಿಟಿ ಕನ್ನಡ ಭಾಷೆಯವರು ಇದ್ದರೆ ಅಂತಹವರಿಗೆ ಕನ್ನಡ ತೆಗೆದು ಕೊಳ್ಳಬೇಕೆಂದು ಹೇಳುವುದು ಸ್ವಾಭಾವಿಕವಾದ ಮಾತು. ಆದರೂ ಕೂಡ ಕಂಪಲ್ಸರಿ ಗ್ರೂಪ್ ಅಂದರೆ ಇಂಗ್ಲಿಷ್, ಹಿಂದಿ, ಮೂರನೆಯದು ಕನ್ನಡ. Group Kanngda is one of the electives. ಇವುಗಳಲ್ಲಿ ಯಾವ ಭಾಷೆಯನ್ನಾದರೂ ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿ ಕೊಟ್ಟಿದೆ.

9-00 A.M.

ಶ್ರೀಮತಿ ಬಿ. ಎರ್. ಸುಬ್ಬಮ್ಮ.—ಅಖಿಲ ಭಾರತ ಸರ್ವಿಸ್‌ಗಳಲ್ಲಿರುವವರ ಮಕ್ಕಳು, ಬ್ಯಾಂಕು ಗಳಲ್ಲಿರುವವರ ಮಕ್ಕಳು ಮುಂತಾದವರಿಗೆ ಇಂಗ್ಲಿಷ್ ಮಾಧ್ಯಮ ಕೊಡಬಹುದೆಂದು ಹೇಳಿದರೆ, ರೈತರ ಮಕ್ಕಳು ಇಂಗ್ಲಿಷ್ ಮಾಧ್ಯಮ ತೆಗೆದುಕೊಳ್ಳಬೇಕೆಂದು ಇಚ್ಛಿಸಿದರೆ ಏನು ಮಾಡುತ್ತೀರಿ ?

ಶ್ರೀ ಎಸ್. ಆರ್ ಕಂಠಿ.—ಇದು ಬಹಳ ಕಷ್ಟ ; ಕನ್ನಡ ದೇಶದಲ್ಲಿದ್ದು ಕನ್ನಡವನ್ನು ಕಲಿಯು ವುದು ಬಿಟ್ಟು ರೈತರ ಮಕ್ಕಳು ಇಂಗ್ಲಿಷ್ ಕಲಿಯಬೇಕೆಂದರೆ ಹೇಗೆ ?

ಶ್ರೀಮತಿ ಬಿ. ಎರ್ ಸುಬ್ಬಮ್ಮ.—ಮೈಸೂರಿನಲ್ಲಿ ಕನ್ನಡ ಮಾಧ್ಯಮವನ್ನು ತೆಗೆದುಕೊಳ್ಳ ಬೇಕೆಂಬ ನಿರ್ಧಾರವಾಗಿರುವಂತೆ, ನೆರೆ ಪ್ರಾಂತಗಳಾದ ಮದರಾಸು, ಗುಜರಾತು ಮುಂತಾದ ಕಡೆಯೂ ಆಗಿದೆಯೆ ?

ಶ್ರೀ ಎಸ್. ಆರ್. ಕಂಠಿ.—ಇದು ಅಖಿಲ ಭಾರತ ನೀತಿಯಾಗಿದೆ, ಎಲ್ಲ ತಜ್ಞರೂ ಇದನ್ನು ಒಪ್ಪಿ ದ್ದಾರೆ, ಕೇಂದ್ರ ಸರ್ಕಾರದವರೂ ಒಪ್ಪಿದ್ದಾರೆ. ಮೂರು ಭಾಷೆಗಳನ್ನು ಕಲಿಯಬೇಕೆಂಬ ನೀತಿ ಮೈಸೂರು, ಕೇರಳ, ಆಂಧ್ರ ಮತ್ತು ಮದರಾಸುಗಳಲ್ಲಿ ಏಕರೀತಿಯಾಗಿದೆ. ಅದರಂತೆ ನಾವು ಮಾಡುತ್ತಿದ್ದೇವೆ. ನಾವಾದರೂ ಅಲ್ಲಲ್ಲಿ ಸ್ವಲ್ಪ ರಿಯಾಯಿತಿ ತೋರಿಸುತ್ತಿದ್ದೇವೆ, ಆದರೆ ಮದರಾಸಿ ನಲ್ಲಿ ಬಹಳ ಸ್ಟ್ರಿಕ್ಟ್ ಆಗಿದ್ದಾರೆ.

ಶ್ರೀಮತಿ ಬಿ. ಎರ್. ಸುಬ್ಬಮ್ಮ.—ಮದರಾಸಿನಲ್ಲಿ ತಮಿಳು ಭಾಷೆಯ ವಿಧಿಯಮ ತೆಗೆದು ಕೊಂಡರೆ ಸ್ಟೈಪೆಂಡ್ ಕೊಡುತ್ತೇವೆಂದು ಸರ್ಕಾರದವರು ಹೇಳಿದರೂ ಅದಕ್ಕೆ ಬಾರದೇಯಿರುವುದು ಗೊತ್ತಿದೆಯೆ ?

ಶ್ರೀ ಎಸ್. ಆರ್. ಕಂಠಿ.—ಅಲ್ಲಿ ಎಸ್. ಎಸ್. ಎರ್. ಸಿ. ವರೆಗೆ ತಮಿಳಿನಲ್ಲೇ ಕಲಿಯುತ್ತಾರೆ, ಪಿ. ಯು. ಸಿ. ಗೆ ಬಂದ ಮೇಲೆ ತಮಿಳು ಮಾಧ್ಯಮ ತೆಗೆದುಕೊಳ್ಳಿ ಎಂದು ಹೇಳಿದರೆ ತೆಗೆದು ಕೊಳ್ಳುವುದಿಲ್ಲ, ಇಂಗ್ಲಿಷ್ ತೆಗೆದುಕೊಳ್ಳುತ್ತಾರೆ.

ಶ್ರೀಮತಿ ಬಿ. ಎರ್ ಸುಬ್ಬಮ್ಮ.— ನಮ್ಮ ಮಕ್ಕಳಿಗೆ ಇಂಥದೇ ಭಾಷೆಯನ್ನು ಕಲಿಸಬೇಕೆಂದು ನಾವು ಇಚ್ಛಿಸಿದರೆ ಅದಕ್ಕೆ ಅಡ್ಡಿ ಬರುವುದು ನ್ಯಾಯವೆ ?

ಶ್ರೀ ಎಸ್. ಆರ್. ಕಂಠಿ.—ಮಾತೃಭಾಷೆ ಕನ್ನಡವಾಗಿದ್ದರೆ, ಅದನ್ನು ಬೇಡ ಅನ್ನುವುದು ಹೇಗೆ. If salt loses its saltness, what is to be done ?

ಶ್ರೀಮತಿ ಬಸವರಾಜೇಶ್ವರಿ.—ಹೈಸ್ಕೂಲಿನಲ್ಲಿ ಕನ್ನಡದಲ್ಲಿ ಸೈನ್ಸ್ ವಿಷಯಗಳನ್ನು ಕಲಿಯು ವುದರಿಂದ, ಅವರು ಪಿ. ಯು. ಸಿ. ಗೆ ಬಂದ ಮೇಲೆ ಇಂಗ್ಲಿಷ್‌ನಲ್ಲಿ ಕಲಿಯಬೇಕಾಗಿ ಫೇರ್ ಆಗುವು ದನ್ನು ಹೋಗರಾಡಿಸಲು ಏನು ಕಾರ್ಯಕ್ರಮ ಕೈಗೊಂಡಿದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಶೈನ್ಸ್ ಶಬ್ದಗಳನ್ನು ಕನ್ನಡದಲ್ಲಿಯೂ ಹೇಳುತ್ತಾರೆ ಇಂಗ್ಲಿಷ್ ದಲ್ಲಿಯೂ ಹೇಳುತ್ತಾರೆ, ಆದರೆ ಇಂಗ್ಲಿಷ್‌ನಲ್ಲಿ ಬರೆಯುವುದು ಸಾಧ್ಯವಿಲ್ಲ. Medium of Instruction ಇಲ್ಲಿ ಕನ್ನಡ ಇರುವುದನ್ನು ಒಪ್ಪಲೇಬೇಕು. ಅಖಿಲ ಭಾರತ ನೀತಿಯನ್ನು ವ್ಯತ್ಯಾಸ ಮಾಡುವುದಕ್ಕಾಗುವುದಿಲ್ಲ.

Smt. VASANTALATA MIRJANKAR.—In order to safeguard the interests of the minorities, will Government consider the question of giving permission to start English medium schools wherever necessary?

ಶ್ರೀ ಎಸ್. ಆರ್. ಕಂಠಿ.—ಯಾರ ಮಾತೃಭಾಷೆ ಕನ್ನಡವಲ್ಲವೋ ಅವರಿಗೆ ಅವರ ಮಾತೃಭಾಷೆಯಲ್ಲಿ ಶಿಕ್ಷಣ ಬೇಕೆಂದರೆ, ಶಾಲೆ ಕೊಡುತ್ತೇವೆ, ತರಗತಿ ತೆರೆಯುತ್ತೇವೆ. ಆದರೆ ಅಲ್ಲಿ ಅನೇಕ ಮೈನಾರಿಟಿಗಳ ಭಾಷೆಯಿದ್ದರೆ ಇಂಗ್ಲಿಷ್ ಕೊಡುತ್ತೇವೆ; ಒಂದು ವೇಳೆ ಇಂಗ್ಲಿಷ್ ಬೇಕೆಂದು ಕೇಳಿದರೆ ಸಹಾನುಭೂತಿಯಿಂದ ಯೋಚನೆ ಮಾಡುತ್ತೇವೆ.

ಶ್ರೀ ಟಿ. ಮಾದಯ್ಯ ಗೌಡ.—ಹಿಂದೆ ಎಸ್. ಎಸ್. ನುಬ್ಬರಾಯರ ಕಾಲದಿಂದಲೂ ಕನ್ನಡದ ಮಕ್ಕಳಿಗೆ ಕನ್ನಡ ಮಾಧ್ಯಮದಲ್ಲಿ ಹೇಳಿಕೊಟ್ಟರೆ ಅವರಿಗೆ ಚೆನ್ನಾಗಿ ಬರುತ್ತದೆ, ಇಂಗ್ಲಿಷ್ ಕಲಿಯುವುದೂ ಸುಲಭವಾಗುತ್ತದೆಂಬುದನ್ನು ಪರೀಕ್ಷೆ ನಡೆಸಿ, ಕಂಡು ಹಿಡಿದು, ಕನ್ನಡ ಮಾಧ್ಯಮವೇ ಒಳ್ಳೆಯದೆಂದು ತಜ್ಞರು ತೀರ್ಮಾನ ಮಾಡಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಹೇಳುವುದು ಸತ್ಯ; ಅಖಿಲಭಾರತದ ನೀತಿಯನ್ನು ಅದರಂತೆಯೇ ಮಾಡಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಇಂಗ್ಲಿಷ್ ಭಾಷೆಯ ಮಾಧ್ಯಮವಿರತಕ್ಕ ಶಾಲೆಗಳಲ್ಲಿ ಕನ್ನಡವನ್ನು compulsory ಮಾಡಿದ್ದಾರೆಯೆ?

ಶ್ರೀ ಎಸ್. ಆರ್. ಕಂಠಿ.—ನೋಡಿ ಹೇಳುತ್ತೇನೆ.

ಶ್ರೀ ಎಸ್. ಶಿವಪ್ಪ.—ಇಂಗ್ಲಿಷ್ ಭಾಷಾ ವ್ಯಾಮೋಹ ಹೋಗುವುದಕ್ಕಾಗಿ ಕನ್ನಡ ಅಖಿಲ ಭಾರತ ಪರೀಕ್ಷೆಗಳಲ್ಲಿ ಮೈಸೂರಿನಿಂದ ಹೋಗಿ ಕೂರುವ ಅಭ್ಯರ್ಥಿಗಳು ಕನ್ನಡ ಭಾಷೆಯಲ್ಲೇ ಉತ್ತರ ಬರೆಯಲು ಅವಕಾಶ ಮಾಡಲು ಪ್ರಯತ್ನ ಮಾಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಅದು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಪ್ರಶ್ನೆ. ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನವರು ಮಾಡಬಹುದು. ಶ್ರೀಮತಿ ಶಿವಪ್ಪನವರು ಪ್ರಯತ್ನಿಸಿ ಅಲ್ಲಿ ಮಾಡಿಸಬಹುದು. ಇದಕ್ಕೆ ದೇವರು ಅವರಿಗೆ ಅವಕಾಶ ಕೊಡಲೆಂದು ಪ್ರಾರ್ಥಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಭಾಷಾ ವ್ಯಾಮೋಹದಲ್ಲಿ ಕೆಲವರಿಗೆ ಸೌಲಭ್ಯ ಸಿಕ್ಕಿ ಮತ್ತೆ ಕೆಲವರಿಗೆ ಸಿಕ್ಕದೆ ಹೋದರೆ ಅದು discriminate ಮಾಡಿದ ಹಾಗಾಗುವುದಿಲ್ಲವೆ?

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ discrimination ಪ್ರಶ್ನೆ ಬರುವುದಿಲ್ಲ; ಅಖಿಲಭಾರತ ನೀತಿಯನ್ನು ನಾವು ಒಪ್ಪಿಕೊಂಡಿದ್ದೇವೆ. ಐ. ಎ. ಎಸ್. ವಿಚಾರದಲ್ಲಿ ಕೇಳಿದರು, ಯಾವ ರೀತಿ ಪರೀಕ್ಷೆ ತೆಗೆದುಕೊಳ್ಳಬಹುದೆಂದು ಕೇಂದ್ರ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ.

ಶ್ರೀ ಬಿ. ಚನ್ನಬಸಪ್ಪ ಗೌಡ.—ಮಾಧ್ಯಮವನ್ನಾಗಿ ಕನ್ನಡವನ್ನೇ ತೆಗೆದುಕೊಳ್ಳಬೇಕು ಇಂಗ್ಲಿಷನ್ನೇ ತೆಗೆದುಕೊಳ್ಳಬೇಕು ಎಂದು ಈಗ ಹಾಕಿರುವ restriction ತೆಗೆದು ಹಾಕುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ನ್ಯಾಯವಿ, ಇಷ್ಟು ಹೊತ್ತಿನ ತನಕ ರಾಮಾಯಣ ಹೇಳಿದೆ, ಈಗ ಸೀತೆ ಯಾರೆಂದು ಕೇಳಿದರೆ ಏನು ಹೇಳುವುದು (ನಗು!)

Sri J. P. SARVESH.—Has it come to the notice of Government that by taking Kannada as the medium of instruction, the students after completing their education cannot get into Central Services?

ಶ್ರೀ ಎಸ್. ಆರ್. ಕಂಠಿ.—ನಾನಾಗಲೇ ಹೇಳಿದೆ, ಐ. ಎ. ಎಸ್. ಮತ್ತು ಸೆಂಟ್ರಲ್ ಸರ್ವಿಸಸ್‌ನಲ್ಲಿ ಎಲ್ಲರಿಗೂ ಅವಕಾಶ ಕೊಡಬೇಕು. Regional language ಕಲಿತವರಿಗೆ ಯಾವ ರೀತಿ ಅವಕಾಶ ಕೊಡಬೇಕೆಂಬುದು ಪರಿಶೀಲನೆ ಮಾಡಬೇಕಾದ ವಿಷಯ.

ಶ್ರೀ ಎಂ. ಆರ್. ಪಾಟೀಲ್.—ಐ.ಎ.ಎಸ್. ಪರೀಕ್ಷೆ ಕನ್ನಡದಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ನಡೆಯುತ್ತಿದೆಯೆ?

ಶ್ರೀ ಎಸ್. ಆರ್ ಕಂಠಿ.—Regional language ಗೂ ಅದಕ್ಕೂ ಯಾವ ರೀತಿ ಸಂಬಂಧವಿರಬೇಕು ಎಂಬುದು ರೀಜನಲ್ ಕೌನ್ಸಿಲ್ ಮೀಟಿಂಗಿನಲ್ಲಿ ಬಂದು ನಾವು ಸರ್ಲ್ ಮಾಡಿದ್ದೇವೆ; ಕೇಂದ್ರ ಸರ್ಕಾರದವರು ಯೋಚನೆ ಮಾಡಿ ಯಾರಿಗೂ ತೊಂದರೆಯಾಗದೇಯಿರುವಂತೆ ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯ.—ಹೈಸ್ಕೂಲು ತರಗತಿಗಳಲ್ಲಿ ಕನ್ನಡ, ಇಂಗ್ಲಿಷು ಎರಡನ್ನೂ ಇಟ್ಟಿರುವುದರಿಂದ ಎಲ್ಲರೂ ಇಂಗ್ಲಿಷ್ ಮೀಡಿಯುಮ್‌ಗೆ ಹೋಗುವುದು ಗೊತ್ತಿದೆಯೆ ?

ಶ್ರೀ ಎಸ್. ಆರ್ ಕಂಠಿ.—ಇಂಗ್ಲಿಷ್ ಮೀಡಿಯುಮ್ ಎಲ್ಲವನ್ನೂ ಮಾಡಿಲ್ಲ. ಇಂಗ್ಲಿಷನ್ನು compulsory subject ಆಗಿ ಕಲಿಸುತ್ತಿದ್ದಾರೆ. ಅದು medium of instruction ಅಲ್ಲ.

Application received for Interest-Free Loans from the Ryots of Channarayapatna Taluk.

*Q.—431 Sri S. SHIVAPPA (Sravanabelagola).—

Will the Government be pleased to state:—

(*a*) whether they have received any applications for interest-free loans from the ryots of the distress area (due to heavy rains) in Channarayapatna Taluk during 1962-63;

(*b*) what is the action taken on those applications ?

A.—Sri M. V. KRISHNAPPA (Minister for Revenue).—

(*a*) Yes. 32 applications were received.

(*b*)

1.	No. of applications rejected.	...	2
2.	Notice issued for getting Khate registered	...	21
3.	Clearance of encumbrance to be produced	...	4
4.	Ready for sanction	...	4
5.	Loan sanctioned	...	1
		Total...	32

Sri S. SIVAPPA.—Out of 32 applications received, only 1 has been sanctioned. Does it mean that Government is moving very fast to come to the aid of the distressed people ?

Sri M. V. KRISHNAPPA.—Government is moving very fast, but the people who want loan are not moving fast. They have been asked to change the khata to their names to enable us to give loan to them, but they have not changed the khata to their names. That means they are not very keen in getting the loan.

Sri S. SIVAPPA.—The Revenue Department is responsible to distribute relief to the distressed areas. Is it not its responsibility to come to the aid of the ryots when they are in distress and see that their applications are properly written and the loan is sanctioned to them promptly ?

Sri M. V. KRISHNAPPA.—Government went to their aid. We gave them distress relief immediatly of Rs. 2,000. Out of the 32 applicants who had applied for interest-free loans up to Rs. 1,000 permissible under the law, 21 of them had to change their khatas to their names. Without changing the khatas to their names, we cannot issue any loan to anybody. So they have been asked to change the khatas which they have not done and so they have not been given the loan whereas the persons who have changed the khatas to their names have got the loan.